ಹೊತ್ತು ಹನ್ನೊಂದರ ಗಡಿ ದಾಟುವತ್ತ ದಾಪಿಡುತ್ತಿತ್ತು. 'ಬರಿಸ್ತಾ'ದ ಪರಿಚಾರಕರು, ಒಂದೊಂದಾಗಿ ಖಾಲಿಯಾದ, ಅಂದರೆ ಗಿರಾಕಿಗಳಿಲ್ಲದ ಮೇಜುಗಳಲ್ಲಿದ್ದ ಬೆಳಕು ನಂದಿಸುತ್ತಿದ್ದರು. ಮಹಾನಗರಿಯೊಳಗಿನ ಒಳಗೊಳಗಿನ ಊರುಗಳು ಈಗಾಗಲೇ ಮಲಗಿಹೋಗಿದ್ದವೇನೋ. 'ನಾನು ಹೇಳಬೇಕಾಗಿರೋದನ್ನ ಮೊಟುಕಾಗಿ ಹೇಳಿಬಿಡುತ್ತೇನೆ... ಹೆಚ್ಚು ಸಮಯವಿಲ್ಲ...' ಅಂತಂದೆ. ಆಮ್ರಪಾಲಿ ಕಣ್ಣಲ್ಲಿಯೇ ಸರಿ ಎಂದು ಸನ್ನೆಗೈದಳು. 'ನಾನು ಏನೂಂತ ಈಗಾಗಲೇ ನೀನೇ ಹೇಳಿಯಾಗಿದೆ. ನಾನೂ ನನ್ನ ಬಗ್ಗೆ ಸಾಕಷ್ಟು ಹೇಳಿಕೊಂಡಿದೀನಿ... ಪದ್ಯ ಟಂಕಿಸಿದೀನಿ... ಇರಲಿ. ಮೋಹನಸ್ವಾಮಿ ನನಗೊಂದು ಅಕ್ವೇಂಟೆನ್ಸು ಮಾತ್ರ... ಅವನ ಬಗ್ಗೆ ಹೆಚ್ಚೇನೂ ಆಡಲಾರೆ. ಯಾಕೆಂದರೆ ನಾನು ಅವನಂತಲ್ಲ... ಆ ವಿಷಯ ಬೇಡ. ಇನ್ನು ಜೆಂಡರ್ ಬಯಾಸ್ ಬಗ್ಗೆ ನೀನು ಸಾಕಷ್ಟು ಹೇಳಿದೆ. ಹೆಣ್ಣುಗಂಡುಗಳ ನಡುವಿನ ತಾರತಮ್ಯ ಅಂತೆಲ್ಲ ದೊಡ್ಡ ಪರಿಭಾಷೆ ಹಚ್ಚಿ ಹೇಳಿದೆ... ನಿಜ ಹೇಳಲಾ? ನನ್ನ ಮಟ್ಟಿಗೆ ಗಂಡು ಹೆಣ್ಣು ಯಾವೊತ್ತೂ ಬೇರೆ ಬೇರೆ ಅಲ್ಲ. ಇಬ್ಬರನ್ನೂ ಸಮಸಮ ಪ್ರೀತಿಸುತೀನಿ... ಅಂಡ್ ಐ ಹ್ಯಾವ್ ನೋ ಸಚ್ ಬಯಾಸಸ್...' ಎಂದು ಕಣ್ಣು ಹೊಡೆದೆ. 'ಇನ್ನು ಹೊರಡೋಣವಾ?' ಎಂದು ಎದ್ದು ನಿಂತೆ. ಆ ಹೊತ್ತಿನಲ್ಲಿ ಆಮ್ರಪಾಲಿಯ ಕಣ್ಣುಗಳು ಇಡೀ ನಭೋಮಂಡಲದ ಬೆಳಕಿನೊಟ್ಟನ್ನು ಸೆಳಕಿದವನ್ನಿಸಿದವು. ಸಾಂಗೋಪಾಂಗ ಪುಳಕಿಸಿದಳೇನೋ, ನಿಧಾನವಾಗಿ ಕುಳಿತಲ್ಲಿಂದೆದ್ದು ನನ್ನೆದುರು ಬಂದುನಿಂತಳು. 'ನಾನು ಹೋಟೆಲ್ ರೂಮಿಗೆ ಹೋಗುತಾ ಇದ್ದೀನಿ... ಬೇಕಿದ್ದರೆ ನೀನೂ ಬರಬಹುದು... ನಿನಗಿಷ್ಟವಿದ್ದರೆ ನಿನ್ನ ಆಸೆಯೂ ಫಲಿಸಬಹುದು...' ಎನ್ನುವ ಮಾತನ್ನಿನ್ನೂ ಮುಗಿಸಿರಲಿಲ್ಲ, ಥಟಕ್ಕನೆ ನನ್ನ ಕೈಗಳನ್ನು ತನ್ನ ಬೊಗಸೆಯಲ್ಲಿ ತಾಳಿ ಎದೆಗೊತ್ತಿಕೊಂಡಳು. 'ಹೆಣ್ಣೆ, ನಾನು ಮತ್ತೆ ಒಂಟಿಯಿರಬೇಕು ಅನಿಸುವವರೆಗೂ ನೀನು ನನ್ನೊಡನಿರಬಹುದು... ಯಾವುದೇ ನಂಟುಗಂಟಿನ ಗೊಡವೆಯಿರದೆ...' ಎಂದು, ಮೊದಲ ಸ್ಪರ್ಶದ ವಿದ್ಯುನ್ಮೋಡಿಯ ನಡುವೆ ಮೆಲ್ಲಗೆ ಅವಳ ಕಿವಿಯಲ್ಲುಸುರಿದೆ.

ಎರಡು ಪಾತ್ರಗಳು ಮೆಟಫರಿಕಲಾಗಿ ಸಂಧಿಸಿದ ಹಾಗೆ, ಇಬ್ಬರೂ ಒಬ್ಬರಲ್ಲೊಬ್ಬರು ಸಂದುಕೊಂಡೆವು.

---

## ನಾಗರಾಜ ವಸ್ತಾರೆ

ಕವಿ, ಕತೆಗಾರ, ಪ್ರಬಂಧಕಾರ, ಆರ್ಕಿಟೆಕ್ಟ್ ನಾಗರಾಜ ವಸ್ತಾರೆ 'ಹಕೂನ ಮಟಾಟ', 'ನಿರವಯವ' ಎಂಬ ಕಥಾಸಂಕಲನಗಳನ್ನು, 'ಮಡಿಲು' ಎಂಬ ನೀಳ್ಗತೆಯನ್ನು ಪ್ರಕಟಿಸಿದ್ದಾರೆ. 'ಹಳೆಮನೆ ಕತೆ', 'ಬಯಲು ಆಲಯ' ಮತ್ತು 'ಪಟ್ಟಣ ಪುರಾಣ' ಅವರ ಅಂಕಣ ಬರಹಗಳ ಪುಸ್ತಕಗಳಾದರೆ, 'ವಸ್ತಾರೆ ಪದ್ಯಗಳು', 'ವಸ್ತಾರೆ ಇನ್ನೂ **75**' ಅವರ ಕವಿತೆಗಳ ಸಂಗ್ರಹಗಳಾಗಿವೆ. ಬೆಂಗಳೂರಿನಲ್ಲಿ ನೆಲೆಸಿರುವ ವಸ್ತಾರೆ, ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಪ್ರಯೋಗ ನಿರತರು.